2018 ಕ.ತೀ.ವ 1439

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೋಹನ್ ಎಂ. ಶಾಂತನಗೌಡರ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

### ಶ್ರೀಮತಿ ಶೈಲಮ್ಮ –ವಿರುದ್ಧ– ಕರ್ನಾಟಕ ರಾಜ್ಯ, (ಕಾರ್ಯದರ್ಶಿಯವರಿಂದ ಪ್ರತಿನಿಧಿತ, ಗೃಹ ಇಲಾಖೆ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಹೆಬಿಯಸ್ ಕಾರ್ಪಸ್ ಅರ್ಜಿ.

ಮೂರನೇ ಪಕ್ಷಕಾರನು ಹೊರಡಿಸಿದ 1.3.2016ರ ದಿನಾಂಕದ ಬಂಧನಾದೇಶವನ್ನು, 05.03.2016ನೇ ದಿನಾಂಕದಂದು ಎರಡನೇ ಪ್ರತ್ಯರ್ಜಿದಾರನು ಹೊರಡಿಸಿದ ಅನುಮೋದನಾದೇಶ ಹಾಗು 13.04.2016ನೇ ದಿನಾಂಕದಂದು ಎರಡನೇ ಪ್ರತ್ಯರ್ಜಿದಾರನು ಹೊರಡಿಸಿದ ದೃಢೀಕರಣ ಆದೇಶಗಳನ್ನು ಈ ರಿಟ್ ಅರ್ಜಿಗಳಲ್ಲಿ ಪ್ರಶ್ನಿಸಲಾಗಿರುತ್ತದೆ.

ಬಂಧಿಯ ವಿರುದ್ಧ ನೊಂದಾಯಿಸಲಾಗಿರುವ ಒಟ್ಟು 9 ಕ್ರಿಮಿನಲ್ ಪ್ರಕರಣಗಳ ಪೈಕಿ, ಒಂದು ಪ್ರಕರಣದಲ್ಲಿ ಬಂಧಿಯು ಅಪರಾಧ ನಿರ್ಣೀತನಾಗಿರುವುದು ನಮಗೆ ಕಂಡು ಬಂದಿದೆ; ಮೂರು ಪ್ರಕರಣಗಳು ನ್ಯಾಯಾಲಯದಲ್ಲಿ ಅಧಿವಿಚಾರಣೆಗೆ ಇತ್ಯರ್ಥದಲ್ಲಿವೆ; ಎರಡು ಪ್ರಕರಣಗಳಲ್ಲಿ ಈತನನ್ನು ಖುಲಾಸೆ ಮಾಡಲಾಗಿದ್ದು, ಇನ್ನುಳಿದ ಮೂರು ಪ್ರಕರಣಗಳಲ್ಲಿ ಆತ ಶಾಂತಿ ಹಾಗು ಸನ್ನಡತೆಯಿಂದಿರುತ್ತಾನೆಂದು ಮುಚ್ಚಳಿಕೆ ನೀಡಿರುತ್ತಾನೆ. ಅರ್ಜಿದಾರನ ವಿರುದ್ಧ ನೊಂದಾಯಿಸಲಾದ ಒಂಭತ್ತು ಪ್ರಕರಣಗಳ ಪೈಕಿ, ಮೂರು ಪ್ರಕರಣಗಳಲ್ಲಿ ಸಮಾಜದ ಶಾಂತಿ ಪಾಲನೆ ಹಾಗು ಸನ್ನಡತೆಯ

*ಡಬ್ಲ್ಯೂಪಿಹೆಚ್‌ಸಿ ಸಂಖ್ಯೆ: 62/2016, ದಿನಾಂಕ 2ನೇ ಜೂನ್, 2016.

ಉದ್ದೇಶಕ್ಕೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ 107 ಹಾಗೂ 110ನೇ ಪ್ರಕರಣಗಳ ಉಪಬಂಧಗಳಡಿಯಲ್ಲಿ ನೊಂದಾಯಿಸಲಾಗಿರುತ್ತದೆ. ಉಳಿದ ಆರು ಪ್ರಕರಣಗಳಲ್ಲಿ, ಭಾರತೀಯ ದಂಡ ಸಂಹಿತೆಯಡಿಯಲ್ಲಿ ದಂಡನೀಯವಾದ ಅಪರಾಧಗಳೆಂದು ಅರ್ಜಿದಾರರ ವಿರುದ್ಧ ಆಪಾದಿಸಿವೆ. ಸದರಿ ಆರು ಪ್ರಕರಣಗಳ ಪೈಕಿ, ಬಂಧಿಯನ್ನು ಒಂದು ಪ್ರಕರಣದಲ್ಲಿ ಅಪರಾಧ ನಿರ್ಣೀತನನ್ನಾಗಿಸಿದ್ದು, ಎರಡು ಪ್ರಕರಣಗಳಲ್ಲಿ ಖುಲಾಸೆ ಮಾಡಲಾಗಿರುತ್ತದೆ. ಮೂರು ಇತರೆ ಪ್ರಕರಣಗಳು ಅಧಿವಿಚಾರಣಾ ನ್ಯಾಯಾಲಯದ ಎದುರು ಪರಿಗಣನೆಗೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿವೆ.

ಅಧಿವಿಚಾರಣಾ ನ್ಯಾಯಾಲಯದ ಮುಂದೆ ಪರಿಗಣನೆಗೆ ಬಾಕಿಯಿರುವಂಥ ಎಲ್ಲಾ ಮೂರು ಇತರೆ ಪ್ರಕರಣಗಳಲ್ಲಿ ಅರ್ಜಿದಾರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆಯೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಅಲ್ಲದೆ, ಯಾವುದೇ ಈ ಮೂರು ಪ್ರಕರಣಗಳಲ್ಲಿ, ಜಾಮೀನಿನ ಮೇಲೆ ಬಿಡುಗಡೆಯ ಸಮಯದಲ್ಲಿ ಬಂಧಿಯ ಮೇಲೆ ವಿಧಿಸಿದ ಯಾವುದೇ ಷರತ್ತನ್ನು ಉಲ್ಲಂಘನೆಯನ್ನು ಆಪಾದಿಸಿ ಜಾಮೀನಿನ ರದ್ಧತಿ ಕೋರಿ ಸರ್ಕಾರವು ಅರ್ಜಿ ಸಲ್ಲಿಸಿರುವುದಿಲ್ಲವೆಂಬುದರಲ್ಲಿಯೂ ಯಾವುದೇ ವಿವಾದವಿರುವುದಿಲ್ಲ. ಜಾಮೀನಿನ ರದ್ಧತಿ ಕೋರಿ ಯಾವುದೇ ಪ್ರಕರಣದಲ್ಲಿ ಸರ್ಕಾರವು ಅರ್ಜಿಯನ್ನು ಸಲ್ಲಿಸದಿರುವುದರಿಂದ, ಬಂಧಿಯು ಜಾಮೀನಿನ ಮೇಲೆ ಬಿಡುಗಡೆಯಾಗುವಾಗ ಆತನ ಮೇಲೆ ವಿಧಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಬಂಧನಾದೇಶದಲ್ಲಿ ಆಪಾದಿಸಲಾದಂತೆ ಸಾಕ್ಷೀದಾರರು, ಮುಂತಾದವರನ್ನು ಭಯಪಡಿಸಲಾಗುತ್ತದೆಂಬುದನ್ನು ಒಳಗೊಂಡಂತೆ ಜಾಮೀನಿನ ಯಾವುದೇ ಷರತ್ತುಗಳನ್ನು ಬಂಧಿಯು ವಾಸ್ತವವಾಗಿ ಉಲ್ಲಂಘಿಸಿದ್ದೇ ಆಗಿದ್ದಲ್ಲಿ, ಸರ್ಕಾರವು ಜಾಮೀನಿನ ರದ್ಧತಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸದೆ ಇರುತ್ತಿರಲಿಲ್ಲ. ವಿಷಯದ ಈ ಹಿನ್ನೆಲೆಯಲ್ಲಿ, ಬಂಧಿಸುವ ಪ್ರಾಧಿಕಾರ, ಬಂಧಿಯು ಸಾಕ್ಷಿದಾರರನ್ನು ಹಾಗೂ ತತ್ಸಂಬಂಧಿ ಸಾರ್ವಜನಿಕರನ್ನು ನ್ಯಾಯಾಲಯದಲ್ಲಿನ ಮುಕ್ತ ಹಾಗು ನ್ಯಾಯಯುತವಾದ ಅಧಿವಿಚಾರಣೆಯನ್ನು ಬಾಧಿಸುವಂತೆ ಬೆದರಿಸುತ್ತಾನೆಂದು ಯಾಂತ್ರಿಕವಾಗಿ ನಮೂದಿಸಿರುತ್ತಾರೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ. ಬಂಧಿಸುವ ಪ್ರಾಧಿಕಾರವು ತಳೆದ ಇಂಥ ಅಭಿಪ್ರಾಯಕ್ಕೆ ಯಾವುದೇ ಆಧಾರವಿರುವುದಿಲ್ಲ. ಹಾಗಾಗಿ, ಪ್ರಸ್ತುತ ಬಂಧನಾದೇಶವು, ಬಂಧಿಸುವ ಪ್ರಾಧಿಕಾರವು ಗಮನಕೊಟ್ಟು ಕಾರ್ಯನಿರ್ವಹಿಸದ ಅಂಶದಿಂದ ರೂಪುಗೊಂಡಿರುವಂಥದ್ದಾಗಿರುತ್ತದೆ.

*(2012)1 ಎಸ್‌ಸಿಸಿ 72ರಲ್ಲಿ ವರದಿಯಾದ ಋಷಿಕೇಷ್ ತಾನಾಜಿ ಭೊಯ್ತೇ –ವಿರುದ್ಧ– ಮಹಾರಾಷ್ಟ್ರ ಸರ್ಕಾರ ಹಾಗು ಇತರರು* ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಡಲಾಗಿರುವಂತೆ, ಸಕ್ಷಮ ನ್ಯಾಯಾಲಯವು ಜಾಮೀನಿನ ಮೇಲೆ ಒಬ್ಬ ವ್ಯಕ್ತಿಯನ್ನು ವಿಸ್ತೃತಗೊಳಿಸಿದಾಗ, ಕ್ರಿಮಿನಲ್ ನ್ಯಾಯಾಲಯವು ಅಧಿವಿಚಾರಿಸಬೇಕಾದಂಥ ಆರೋಪದ ಮೇಲೆಯೇ ಆಧರಿಸಿರುವಂತ ಸಂರಕ್ಷಣಾ ಬಂಧನಾದೇಶದ ಸಿಂಧುತ್ವವನ್ನು ಪರಿಶೋಧಿಸುವಲ್ಲಿ ಬಹು ದೊಡ್ಡ ಎಚ್ಚರಿಕೆಯನ್ನು ನೀಡಬೇಕಾಗಿರುತ್ತದೆ. ಸದರಿ ವಿಷಯದಲ್ಲಿ, ಬಂಧನಾದೇಶದಲ್ಲಿ ಉಲ್ಲೇಖಿಸಿದ ಅಪರಾಧಗಳು ದೂರಾನ್ವಯಿಂದ ಹಾಗೂ ಬಂಧನಾದೇಶಕ್ಕೆ ಬೇಕಾಗಿ ಬರುವ ದೃಶ್ಯಯಿಲ್ಲದವಾಗಿವೆ. ಹಾಗಾಗಿ, ಆ ಪ್ರಕರಣದ ವಾಸ್ತವಾಂಶಗಳು ಹಾಗು ಸಂದರ್ಭಗಳಡಿಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಸದರಿ ಆಧಾರಗಳ ಮೇಲಿನ ಬಂಧನಾದೇಶವನ್ನು ರದ್ದುಪಡಿಸಲು ಮುಂದಾಗಿರುತ್ತದೆ.

ಮೇಲೆ ಹೇಳಿದಂತೆ, ಪ್ರಸ್ತುತ ವಿಷಯದಲ್ಲಿ ಕೂಡ, ಬಂಧಿಯು ಭಾರತೀಯ ದಂಡ ಸಂಹಿತೆಯ ಉಪಬಂಧಗಳಡಿಯಲ್ಲಿ ಬಂಧಿಯು, ದಂಡನೀಯವಾದ ಆರು ಅಪರಾಧಗಳನ್ನು ಎಸಗಿರುತ್ತಾನೆಂಬ ಆಪಾದನೆಯೊಂದಿಗೆ ಆತನ ವಿರುದ್ಧ ಆರು ಪ್ರಕರಣಗಳನ್ನು ನೋಂದಾಯಿಸಲಾಗಿರುತ್ತದೆಂಬುದು ನಮಗೆ ಕಂಡು ಬರುತ್ತದೆ; ಬಂಧಿಯು ಎರಡು ಪ್ರಕರಣಗಳಲ್ಲಿ ಖುಲಾಸೆಯಾಗಿರುತ್ತಾನೆ; ಒಂದು ಕ್ರಿಮಿನಲ್ ಪ್ರಕರಣವಾಗಿದ್ದು, ಅದರಲ್ಲಿ ಈತ ಅಪರಾಧ ನಿರ್ಣೀತನಾಗಿದ್ದು, ಕಾರಾವಾಸದ ಶಿಕ್ಷೆಗೆ ಒಳಗಾಗಿರುತ್ತಾನೆ. ಉಳಿದ ಮೂರು ಪ್ರಕರಣಗಳಲ್ಲಿ ಈತನಿಗೆ ಜಾಮೀನನ್ನು ವಿಸ್ತರಿಸಲಾಗಿರುತ್ತದೆ. ಬಂಧಿಯ ವಿರುದ್ಧ ನೊಂದಾಯಿಸಲಾದ ಕೊನೆ ಪ್ರಕರಣ (ಅಂದರೆ ಕ್ರ.ಸಂ. 9ರಲ್ಲಿನ ಪ್ರಕರಣ)ವು ಅಪರಾಧ ಸಂಖ್ಯೆ:118/2015 ಆಗಿರುತ್ತದೆ. ಇದನ್ನು 2015ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 110ನೇ ಪ್ರಕರಣದಡಿಯಲ್ಲಿ ನೊಂದಾಯಿಸಲಾಗಿರುತ್ತದೆ. ಅಲ್ಲದೆ, ಕ್ರ.ಸಂ.4 ಹಾಗು 6ರಲ್ಲಿನ ಪ್ರಕರಣಗಳು ದಂಡ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣದ ಉಪಬಂಧಗಳಡಿಯಲ್ಲಿನವಾಗಿರುತ್ತವೆ. ಕರ್ನಾಟಕ ಕಳ್ಳಭಟ್ಟಿವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ರ 2(ಜಿ) ಪ್ರಕರಣದಲ್ಲಿ ಕಂಡುಬಂದಂಥ ಪರಿಭಾಷೆಯ ಪ್ರಕಾರ 'ಗೂಂಡಾ' ಎಂದರೆ

ಭಾರತೀಯ ದಂಡ ಸಂಹಿತೆಯ ಅಧ್ಯಾಯ VIII, ಅಧ್ಯಾಯ–XV, ಅಧ್ಯಾಯ–XVI, ಅಧ್ಯಾಯ–XVII ಹಾಗೂ ಅಧ್ಯಾಯ–XXIII ಗಳಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ರೂಢಿಗತವಾಗಿ ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ಮಾಡಲು ದುಷ್ಪ್ರೇರಿಸುವ ವ್ಯಕ್ತಿ ಅಥವಾ ಗುಂಪಿನ ಸದಸ್ಯ ಅಥವಾ ನಾಯಕ ಎಂಬ ಅರ್ಥವನ್ನು ಹೊಂದಿರುತ್ತದೆ. ಹಾಗಾಗಿ, ಶಾಂತಿ ಪಾಲನೆ ಹಾಗು ಸನ್ನಡತೆಯ ಉದ್ದೇಶಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಡಿಯಲ್ಲಿ ಬಂಧಿಯ ವಿರುದ್ಧ ನೊಂದಾಯಿಸಲಾದ ಪ್ರಕರಣಗಳನ್ನು ಕರ್ನಾಟಕ ಕಳ್ಳಭಟ್ಟಿವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ರ 2(ಜಿ) ಪ್ರಕರಣದ ಅರ್ಥವ್ಯಾಪ್ತಿಯೊಳಗಿನ 'ಗೂಂಡಾ'ದಂತೆ ಯಾರೇ ವ್ಯಕ್ತಿಯನ್ನು ಪರಿಗಣಿಸಲು ಪ್ರಯತ್ನಿಸಬಾರದೆಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ, ಬಂಧಿಯ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣ ಹಾಗು 110ನೇ ಪ್ರಕರಣದಡಿಯಲ್ಲಿ ನೊಂದಾಯಿಸಿದ ಕ್ರ.ಸಂ.4, 6 ಹಾಗೂ 9ನೇ ಪ್ರಕರಣಗಳನ್ನು, ಗೂಂಡಾ ಎಂಬಂತೆ ಬಂಧಿಯನ್ನು ಪರಿಭಾಷಿಸುವಾಗ ಬಂಧಿಸುವ ಪ್ರಾಧಿಕಾರದ ನೆರವನ್ನು ತೆಗೆದುಕೊಳ್ಳಲಾಗಿರುವುದಿಲ್ಲ ಹಾಗು ಉದಾಹರಿಸಲಾಗಿರುವುದಿಲ್ಲ.

ಬಂಧಿಯ ವಿರುದ್ಧ ನೊಂದಾಯಿಸಲಾಗಿರುವ 8ನೇ ಪ್ರಕರಣವು ಭಾರತೀಯ ದಂಡ ಸಂಹಿತೆಯಡಿಯಲ್ಲಿನ ಇತ್ತೀಚಿನ ಪ್ರಕರಣವು ದಿನಾಂಕ:11.5.2014ರಂದು ಎಸಗಲಾದ ಅಪರಾಧಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಭಾರತೀಯ ದಂಡ ಸಂಹಿತೆಯ ಉಪಬಂಧಗಳಡಿಯಲ್ಲಿ ಕೊನೆ ಪ್ರಕರಣದ ನೊಂದಣಿಯು ಸುಮಾರು 1 ವರ್ಷ, 10 ತಿಂಗಳಾಗಿರುವುದರಿಂದ ಅಂದರೆ 1.3.2016 ರಂದು ಬಂಧನಾದೇಶವನ್ನು ಹೊರಡಿಸಿರುವುದರಿಂದ ಬಂಧನಾದೇಶವು ಸದರಿ ಪ್ರಕರಣದಲ್ಲಿ ಸಾಮೀಪ್ಯತೆಯನ್ನು ಹೊಂದಿರುವುದಿಲ್ಲವೆಂದು ಹೇಳಲಾಗುವುದಿಲ್ಲ.

ಮೇಲೆ ಹೇಳಿದ ವಾಸ್ತವಾಂಶಗಳು ಹಾಗು ಸಂದರ್ಭಗಳು ಹಾಗೂ ಈ ಹಿಂದೆ ನಿರೂಪಿಸಲಾದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಪ್ರಶ್ನಿತ ಆದೇಶಗಳು ರದ್ದುಪಡಿಸಲು ತಕ್ಕವಾಗಿವೆ. ತದನುಸಾರವಾಗಿ, 1.3.2016ನೇ ದಿನಾಂಕದ ಅನುಬಂಧ–'ಎ',

**5.3.2016ನೇ ದಿನಾಂಕದ ಅನುಬಂಧ–'ಡಿ' ಹಾಗು 13.4.2016ನೇ ದಿನಾಂಕದ 'ಇ' ಅನುಬಂಧಗಳಲ್ಲಿನ ಪ್ರಶ್ನಿತ ಆದೇಶಗಳನ್ನು ರದ್ದುಪಡಿಸಲಾಗಿರುತ್ತದೆ. ಬಂಧಿಯನ್ನು, ಯಾವುದೇ ಇತರೆ ಕ್ರಿಮಿನಲ್ ಪ್ರಕರಣದಲ್ಲಿ ಅಗತ್ಯಪಡಿಸದಿದ್ದಲ್ಲಿ, ಈ ಕೂಡಲೇ ಬಿಡುಗಡೆಗೊಳಿಸತಕ್ಕದ್ದು.**

**ರಿಟ್ ಹೆಬಿಯಸ್ ಕಾರ್ಪಸ್ ಅರ್ಜಿಯನ್ನು ಅಂಗೀಕರಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** — ***ಪ್ಯಾರಾಗಳಲ್ಲಿ***

*1. (2012)1 ಎಸ್‌ಸಿಸಿ 72*
*ಋಷಿಕೇಷ್ ತಾನಾಜಿ ಭೊಯ್ತೇ –ವಿರುದ್ಧ–*
*ಮಹಾರಾಷ್ಟ್ರ ಸರ್ಕಾರ ಹಾಗು ಇತರರು* — *(ಉಲ್ಲೇ) 4*

*2. ಎಐಆರ್ 1982 ಎಸ್‌ಸಿ 1543*
*ಮೆರುಗು ಸತ್ಯನಾರಾಯಣ –ವಿರುದ್ಧ–*
*ಆಂಧ್ರ ಪ್ರದೇಶ ಸರ್ಕಾರ* — *(ಉಲ್ಲೇ) 5*

ಅರ್ಜಿದಾರರ ಪರ: ಶ್ರೀ ವಿಶ್ವಜಿತ್ ರೈ, ಮಾನ್ಯ ವಕೀಲರು
ಪ್ರತ್ಯರ್ಜಿದಾರರ ಪರ: ಶ್ರೀ ಡಿ. ನಾಗರಾಜ್, ಮಾನ್ಯ ಎಜಿಎ.

## ಆಜ್ಞೆ

**ನ್ಯಾಯಮೂರ್ತಿ ಮೋಹನ್ ಎಂ. ಶಾಂತನಗೌಡರ್:**

ಮೂರನೇ ಪಕ್ಷಕಾರನು ಹೊರಡಿಸಿದ 1.3.2016ರ ದಿನಾಂಕದ ಬಂಧನಾದೇಶವನ್ನು, 05.03.2016ನೇ ದಿನಾಂಕದಂದು ಎರಡನೇ ಪ್ರತ್ಯರ್ಜಿದಾರನು ಹೊರಡಿಸಿದ ಅನುಮೋದನಾದೇಶ ಹಾಗು 13.04.2016ನೇ ದಿನಾಂಕದಂದು ಎರಡನೇ

ಪ್ರತ್ಯರ್ಜಿದಾರನು ಹೊರಡಿಸಿದ ದೃಢೀಕರಣ ಆದೇಶಗಳನ್ನು ಈ ರಿಟ್ ಅರ್ಜಿಗಳಲ್ಲಿ ಪ್ರಶ್ನಿಸಲಾಗಿರುತ್ತದೆ.

2. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿಶ್ವಜಿತ್ ರೈ ರವರು, ದಾಖಲೆಗಳ ಸಹಿತ, ಬಂಧನಾದೇಶವು ಕಾನೂನು ಬಾಹಿರವಾಗಿದ್ದು, ತಡೆಹಿಡಿಯಬೇಕಾದ ಪ್ರಾಧಿಕಾರವು ವಿಷಯದ ಕಡೆ ಸರಿಯಾಗಿ ಗಮನ ನೀಡಿರುವುದಿಲ್ಲ; ಅರ್ಜಿದಾರರ ವಿರುದ್ಧ ಒಂಭತ್ತು ಪ್ರಕರಣಗಳನ್ನು ಹೇರಿದ್ದಾಗ್ಯೂ, ಮೂರು ಪ್ರಕರಣಗಳಲ್ಲಿ ಈತನನ್ನು ಖುಲಾಸೆ ಮಾಡಲಾಗಿದ್ದು, ಇತರೆ ಪ್ರಕರಣಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ; ನೋಂದಾಯಿಸಲಾದ ಒಂಭತ್ತು ಪ್ರಕರಣಗಳ ಪೈಕಿ, ಮೂರು ಪ್ರಕರಣಗಳು, ಉತ್ತಮ ನಡತೆ, ಸಾರ್ವಜನಿಕ ಶಾಂತಿ ನಿರ್ವಹಣೆ ಮುಂತಾದವುಗಳಿಗೆ ಸಂಬಂಧಿಸಿವೆ; ಆರು ಪ್ರಕರಣಗಳನ್ನು ಭಾರತೀಯ ದಂಡ ಸಂಹಿತೆ (ಅಧ್ಯಾಯ XVI)ಯ ಉಪಬಂಧಗಳಡಿಯಲ್ಲಿ ಅರ್ಜಿದಾರರ ವಿರುದ್ಧ ನೋಂದಾಯಿಸಲಾಗಿರುತ್ತದೆ; ಅರ್ಜಿದಾರರ ವಿರುದ್ಧ ನೊಂದಾಯಿಸಿದ ಕೊನೆಯ ಪ್ರಕರಣವು 22.7.2015ನೇ ದಿನಾಂಕದ ಘಟನೆಗೆ ಸಂಬಂಧಿಸಿದ್ದು, ಸದರಿ ಅಪರಾಧವನ್ನು ದಂಡ ಪ್ರಕ್ರಿಯಾ ಸಂಹಿತೆಯ 110(ಇ) ಹಾಗು (ಜಿ) ಪ್ರಕರಣಗಳಡಿಯಲ್ಲಿ ನೋಂದಾಯಿಸಲಾಗಿರುತ್ತದೆ. ಅರ್ಜಿದಾರರ ವಿರುದ್ಧ ನೋಂದಾಯಿಸಲಾದ 8ನೇ ಪ್ರಕರಣವು, ಕೃಷ್ಣ ರಾಜ ಪೊಲೀಸ್ ಠಾಣೆ, ಮೈಸೂರು ಇಲ್ಲಿನ ಅಧಿಕಾರ ವ್ಯಾಪ್ತಿಯೊಳಗೆ 11.5.2014 ರಂದು ನಡೆದ ಘಟನೆಗೆ ಸಂಬಂಧಿಸಿದ್ದಾಗಿರುತ್ತದೆಂದು, ನಿವೇದಿಸಿಕೊಂಡಿರುತ್ತಾರೆ. ಹಾಗಾಗಿ, ಅರ್ಜಿದಾರರ ಪರ ನ್ಯಾಯವಾದಿಗಳ ಪ್ರಕಾರ ಬಂಧಿಸುವ ಪ್ರಾಧಿಕಾರವು ಹೇಳಿದ ಘಟನೆಗೂ, ಹೊರಡಿಸಿರುವ ಬಂಧನಾದೇಶದ ನಡುವೆ ಯಾವುದೇ ಸಾದೃಷ್ಯ ಇರುವುದಿಲ್ಲ. ಆ ಆದೇಶಗಳನ್ನು, ಕೆಲಸದ ಬಗೆಗೆ ಬದ್ಧತೆ ತೋರಿ ಶ್ರದ್ಧೆಯಿಂದ ಮಾಡದೆ, ಯಾಂತ್ರಿಕವಾಗಿ ಮನಸೋಇಚ್ಛೆ ಹೊರಡಿಸಲಾಗಿದೆ; ಬಂಧಿಸುವ ಪ್ರಾಧಿಕಾರ ಕೇವಲ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ ವರದಿಯನ್ನು ಉದಾಹರಿಸಿರುತ್ತದೆ. ಆಕ್ಷೇಪಣೆಗಳ ಹೇಳಿಕೆಯನ್ನು ರಿಟ್ ಅರ್ಜಿಯಲ್ಲಿ ಸಲ್ಲಿಸಿದ್ದಾಗ್ಯೂ, ಇದನ್ನು ಜಿಲ್ಲಾ ಮ್ಯಾಜಿಸ್ಟ್ರೇಟರ್ (ಬಂಧಿಸುವ ಪ್ರಾಧಿಕಾರ) ಅಫಿಡಾವಿಟ್ಟಿನಿಂದ ಬೆಂಬಲಿಸಲಾಗುವುದಿಲ್ಲ. ಆದರೆ, ಇದನ್ನು ಕೃಷ್ಣರಾಜ ಪೊಲೀಸ್ ಠಾಣೆಯ

ಪೊಲೀಸ್ ಇನ್‌ಸ್ಪೆಕ್ಟರ್ ರವರ ಅಫಿಡಾವಿಟಿನಿಂದ ಬೆಂಬಲಿಸಲಾಗಿರುತ್ತದೆ; ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ಪೊಲೀಸ್ ಇನ್ಸ್‌ಪೆಕ್ಟರ್ ರವರ ಮಟ್ಟದ ಅಧಿಕಾರಿಗಳ ಹೆಸರಿನಲ್ಲಿನ ನಿರ್ವಹಿಸಬೇಕಾದ ತಮ್ಮ ಪ್ರಕಾರ್ಯಗಳನ್ನು ಸಂಪೂರ್ಣವಾಗಿ ತ್ಯಜಿಸಿರುತ್ತಾರೆ; ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ಬಂಧಿಸಿದ ಪ್ರಾಧಿಕಾರ ಹೇಗೆ ತೀರ್ಮಾನಕ್ಕೆ ಬಂದಿತು ಎಂಬುದರ ಬಗ್ಗೆ ಏನೂ ತಿಳಿದಿರುವುದಿಲ್ಲ. ಅದರಿಂದಾಗಿ, ಪೊಲೀಸ್ ಇನ್ಸ್‌ಪೆಕ್ಟರ್, ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ಉದಾಹರಿಸಿದ ದಾಖಲೆಗಳಿಗೆ ಯಾವುದೇ ಅವಕಾಶವನ್ನು ಹೊಂದಿರುವುದಿಲ್ಲ. ಆದೇಶವು ಕಾನೂನು ಬಾಹಿರವಾಗಿರುವುದರಿಂದ, ಅದನ್ನು ರದ್ದುಪಡಿಸಬೇಕಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.

ಅದಕ್ಕೆ ಪ್ರತಿಯಾಗಿ, ಮಾನ್ಯ ಸರ್ಕಾರಿ ನ್ಯಾಯವಾದಿಗಳಾದ ಶ್ರೀ ಡಿ. ನಾಗರಾಜ್‌ರವರು, ಪ್ರಶ್ನಿತ ಆದೇಶಗಳಿಗೆ ಪೂರಕವಾಗಿ, ಬಂಧಿಸುವ ಪ್ರಾಧಿಕಾರವು ಸಂದರ್ಭವನ್ನು ಯುಕ್ತವಾಗಿಯೇ ಮನವರಿಕೆ ಮಾಡಿಕೊಂಡ ತರುವಾಯ ಪ್ರಶ್ನಿತ ಬಂಧನಾದೇಶವನ್ನು ಹೊರಡಿಸಿದೆಯೆಂದೂ; ಈ ನ್ಯಾಯಾಲಯವು, ಅಪೀಲು ಪ್ರಾಧಿಕಾರದ ಸರಿತನವನ್ನು ನಿರ್ಧರಿಸಲಾಗಲೀ ಅಥವಾ ಅನ್ಯಥಾ ಬಂಧಿಸುವ ಪ್ರಾಧಿಕಾರವು ವಿಷಯಾತ್ಮಕ ಮನವರಿಕೆಯನ್ನು ಮನಗಾಣಿಸುವುದಕ್ಕಾಗಲೀ ಕುಳಿತಿರುವುದಿಲ್ಲ; ಸಂಬಂಧಪಟ್ಟ ಇನ್‌ಸ್ಪೆಕ್ಟರ್‌ರವರುಗಳು ಅರ್ಜಿದಾರರ ವಿರುದ್ಧ ನೋಂದಾಯಿತ ಪ್ರಕರಣಗಳಿಗೆ ಸಾಮೀಪ್ಯತೆಯ ಕೊರತೆಯಿರುವುದಿಲ್ಲ. ಬಂಧನಾ ಪ್ರಾಧಿಕಾರಕ್ಕೆ, ಅರ್ಜಿದಾರನು, ಆತನ ಬಂಧನಾದೇಶವನ್ನು ಹೊರಡಿಸಿರುವ ಕ್ರಿಮಿನಲ್ ಪ್ರಕರಣಗಳಲ್ಲಿ ತನ್ನ ದಾರಿಯನ್ನು ಸರಿಪಡಿಸಿಕೊಳ್ಳದೆ ಹಾಗು ಸಾಕ್ಷ್ಯಗಳನ್ನು ಬೆದರಿಸುವ ಸಂಭಾವ್ಯತೆಯಿದೆಯೆಂದು ಸಂಬಂಧಪಟ್ಟ ಪ್ರಾಧಿಕಾರಗಳ ದಾಖಲೆಗಳು ಹಾಗೂ ವರದಿಗಳಿಂದ ಮನವರಿಕೆಯಾಗಿರುವುದರಿಂದ ಅರ್ಜಿದಾರನು ಚಿಕ್ಕವನೆಂಬ ಕಾರಣಕ್ಕೆ ಆತನ ಬಗೆಗೆ ಮೃದುಧೋರಣೆ ತಳೆಯಲು ಸಾಧ್ಯವಾಗಿರುವುದಿಲ್ಲವೆಂದು ವಾದಿಸಿರುತ್ತಾರೆ. ಬಂಧಿಯ ವಿರುದ್ಧ 08.08.2013 ರಂದು ಕೆ.ಆರ್. ಉಪವಿಭಾಗದ ಸಹಾಯಕ ಪೊಲೀಸ್ ಆಯುಕ್ತರಿಂದ ರೌಡಿಪಟ್ಟಿಯನ್ನು ಸಹ ತೆರೆಯಲಾಯಿತೆಂದು ನಿವೇದಿಸಿಕೊಂಡಿರುತ್ತಾರೆ. ಇಂಥ ಇನ್ನಿತರೇ ಕಾರಣಗಳಿಂದ ರಿಟ್ ಅರ್ಜಿಯನ್ನು ವಜಾ ಮಾಡಲು ಇವರು ಕೋರಿ ಕೊಂಡಿರುತ್ತಾರೆ.

3. ಬಂಧಿಯ ವಿರುದ್ಧ ನೊಂದಾಯಿಸಲಾಗಿರುವ ಒಟ್ಟು 9 ಕ್ರಿಮಿನಲ್ ಪ್ರಕರಣಗಳ ಪೈಕಿ, ಒಂದು ಪ್ರಕರಣದಲ್ಲಿ ಬಂಧಿಯು ಅಪರಾಧ ನಿರ್ಣೀತನಾಗಿರುವುದು ನಮಗೆ ಕಂಡು ಬಂದಿದೆ; ಮೂರು ಪ್ರಕರಣಗಳು ನ್ಯಾಯಾಲಯದಲ್ಲಿ ಅಧಿವಿಚಾರಣೆಗೆ ಇತ್ಯರ್ಥದಲ್ಲಿವೆ; ಎರಡು ಪ್ರಕರಣಗಳಲ್ಲಿ ಈತನನ್ನು ಖುಲಾಸೆ ಮಾಡಲಾಗಿದ್ದು, ಇನ್ನುಳಿದ ಮೂರು ಪ್ರಕರಣಗಳಲ್ಲಿ ಆತ ಶಾಂತಿ ಹಾಗು ಸನ್ನಡತೆಯಿಂದಿರುತ್ತಾನೆಂದು ಮುಚ್ಚಳಿಕೆ ನೀಡಿರುತ್ತಾನೆ. ಅರ್ಜಿದಾರನ ವಿರುದ್ಧ ನೊಂದಾಯಿಸಲಾದ ಒಂಭತ್ತು ಪ್ರಕರಣಗಳ ಪೈಕಿ, ಮೂರು ಪ್ರಕರಣಗಳಲ್ಲಿ ಸಮಾಜದ ಶಾಂತಿ ಪಾಲನೆ ಹಾಗು ಸನ್ನಡತೆಯ ಉದ್ದೇಶಕ್ಕೆ ಸಂಬಂಧಿಸಿದ ದಂಡ ಪ್ರಕ್ರಿಯಾ ಸಂಹಿತೆಯ 107 ಹಾಗೂ 110ನೇ ಪ್ರಕರಣಗಳ ಉಪಬಂಧಗಳಡಿಯಲ್ಲಿ ನೊಂದಾಯಿಸಲಾಗಿರುತ್ತದೆ. ಉಳಿದ ಆರು ಪ್ರಕರಣಗಳಲ್ಲಿ, ಭಾರತೀಯ ದಂಡ ಸಂಹಿತೆಯಡಿಯಲ್ಲಿ ದಂಡನೀಯವಾದ ಅಪರಾಧಗಳೆಂದು ಅರ್ಜಿದಾರರ ವಿರುದ್ಧ ಆಪಾದಿಸಿವೆ. ಸದರಿ ಆರು ಪ್ರಕರಣಗಳ ಪೈಕಿ, ಬಂಧಿಯನ್ನು ಒಂದು ಪ್ರಕರಣದಲ್ಲಿ ಅಪರಾಧ ನಿರ್ಣೀತನನ್ನಾಗಿಸಿದ್ದು, ಎರಡು ಪ್ರಕರಣಗಳಲ್ಲಿ ಖುಲಾಸೆ ಮಾಡಲಾಗಿರುತ್ತದೆ. ಮೂರು ಇತರೆ ಪ್ರಕರಣಗಳು ಅಧಿವಿಚಾರಣಾ ನ್ಯಾಯಾಲಯದ ಎದುರು ಪರಿಗಣನೆಗೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿವೆ.

ಅಧಿವಿಚಾರಣಾ ನ್ಯಾಯಾಲಯದ ಮುಂದೆ ಪರಿಗಣನೆಗೆ ಬಾಕಿಯಿರುವಂಥ ಎಲ್ಲಾ ಮೂರು ಇತರೆ ಪ್ರಕರಣಗಳಲ್ಲಿ ಅರ್ಜಿದಾರನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆಯೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಅಲ್ಲದೆ, ಯಾವುದೇ ಈ ಮೂರು ಪ್ರಕರಣಗಳಲ್ಲಿ, ಜಾಮೀನಿನ ಮೇಲೆ ಬಿಡುಗಡೆಯ ಸಮಯದಲ್ಲಿ ಬಂಧಿಯ ಮೇಲೆ ವಿಧಿಸಿದ ಯಾವುದೇ ಷರತ್ತನ್ನು ಉಲ್ಲಂಘನೆಯನ್ನು ಆಪಾದಿಸಿ ಜಾಮೀನಿನ ರದ್ಧತಿ ಕೋರಿ ಸರ್ಕಾರವು ಅರ್ಜಿ ಸಲ್ಲಿಸಿರುವುದಿಲ್ಲವ ೆಂಬುದರಲ್ಲಿಯೂ ಯಾವುದೇ ವಿವಾದವಿರುವುದಿಲ್ಲ. ಜಾಮೀನಿನ ರದ್ಧತಿ ಕೋರಿ ಯಾವುದೇ ಪ್ರಕರಣದಲ್ಲಿ ಸರ್ಕಾರವು ಅರ್ಜಿಯನ್ನು ಸಲ್ಲಿಸದಿರುವುದರಿಂದ, ಬಂಧಿಯು ಜಾಮೀನಿನ ಮೇಲೆ ಬಿಡುಗಡೆಯಾಗುವಾಗ ಆತನ ಮೇಲೆ ವಿಧಿಸಿರುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಬಂಧನಾದೇಶದಲ್ಲಿ

ಆಪಾದಿಸಲಾದಂತೆ ಸಾಕ್ಷೀದಾರರು, ಮುಂತಾದವರನ್ನು ಭಯಪಡಿಸಲಾಗುತ್ತದೆಂಬುದನ್ನು ಒಳಗೊಂಡಂತೆ ಜಾಮೀನಿನ ಯಾವುದೇ ಷರತ್ತುಗಳನ್ನು ಬಂಧಿಯು ವಾಸ್ತವವಾಗಿ ಉಲ್ಲಂಘಿಸಿದ್ದೇ ಆಗಿದ್ದಲ್ಲಿ, ಸರ್ಕಾರವು ಜಾಮೀನಿನ ರದ್ಧತಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸದೆ ಇರುತ್ತಿರಲಿಲ್ಲ. ವಿಷಯದ ಈ ಹಿನ್ನೆಲೆಯಲ್ಲಿ, ಬಂಧಿಸುವ ಪ್ರಾಧಿಕಾರ, ಬಂಧಿಯು ಸಾಕ್ಷಿದಾರರನ್ನು ಹಾಗೂ ತತ್ಸಂಬಂಧಿ ಸಾರ್ವಜನಿಕರನ್ನು ನ್ಯಾಯಾಲಯದಲ್ಲಿನ ಮುಕ್ತ ಹಾಗು ನ್ಯಾಯಯುತವಾದ ಅಧಿವಿಚಾರಣೆಯನ್ನು ಬಾಧಿಸುವಂತೆ ಬೆದರಿಸುತ್ತಾನೆಂದು ಯಾಂತ್ರಿಕವಾಗಿ ನಮೂದಿಸಿರುತ್ತಾರೆಂಬುದು ನನ್ನ ಅಭಿಪ್ರಾಯವಾಗಿರುತ್ತದೆ. ಬಂಧಿಸುವ ಪ್ರಾಧಿಕಾರವು ತಳೆದ ಇಂಥ ಅಭಿಪ್ರಾಯಕ್ಕೆ ಯಾವುದೇ ಆಧಾರವಿರುವುದಿಲ್ಲ. ಹಾಗಾಗಿ, ಪ್ರಸ್ತುತ ಬಂಧನಾದೇಶವು, ಬಂಧಿಸುವ ಪ್ರಾಧಿಕಾರವು ಗಮನಕ್ಕೊಟ್ಟು ಕಾರ್ಯನಿರ್ವಹಿಸದ ಅಂಶದಿಂದ ರೂಪುಗೊಂಡಿರುವಂಥದ್ದಾಗಿರುತ್ತದೆ.

4. ***ಋಷಿಕೇಷ್ ತಾನಾಜಿ ಭೋಯ್ತೇ –ವಿರುದ್ಧ– ಮಹಾರಾಷ್ಟ್ರ ಸರ್ಕಾರ ಹಾಗು ಇತರರು***[1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಡಲಾಗಿರುವಂತೆ, ಸಕ್ಷಮ ನ್ಯಾಯಾಲಯವು ಜಾಮೀನಿನ ಮೇಲೆ ಒಬ್ಬ ವ್ಯಕ್ತಿಯನ್ನು ವಿಸ್ತೃತಗೊಳಿಸಿದಾಗ, ಕ್ರಿಮಿನಲ್ ನ್ಯಾಯಾಲಯವು ಅಧಿವಿಚಾರಿಸಬೇಕಾದಂಥ ಆರೋಪದ ಮೇಲೆಯೇ ಆಧರಿಸಿರುವಂಥ ಸಂರಕ್ಷಣಾ ಬಂಧನಾದೇಶದ ಸಿಂಧುತ್ವವನ್ನು ಪರಿಶೋಧಿಸುವಲ್ಲಿ ಬಹು ದೊಡ್ಡ ಎಚ್ಚರಿಕೆಯನ್ನು ನೀಡಬೇಕಾಗಿರುತ್ತದೆ. ಸದರಿ ವಿಷಯದಲ್ಲಿ, ಬಂಧನಾದೇಶದಲ್ಲಿ ಉಲ್ಲೇಖಿಸಿದ ಅಪರಾಧಗಳು ದೂರಾನ್ವಯಿಂದ ಹಾಗೂ ಬಂಧನಾದೇಶಕ್ಕೆ ಬೇಕಾಗಿರುವ ಸಾದೃಶ್ಯತೆಯಿಲ್ಲದವಾಗಿವೆ. ಹಾಗಾಗಿ, ಆ ಪ್ರಕರಣದ ವಾಸ್ತವಾಂಶಗಳು ಹಾಗು ಸಂದರ್ಭಗಳಡಿಯಲ್ಲಿ ಸರ್ವೋಚ್ಚ ನ್ಯಾಯಾಲಯವು, ಸದರಿ ಆಧಾರಗಳ ಮೇಲಿನ ಬಂಧನಾದೇಶವನ್ನು ರದ್ದುಪಡಿಸಲು ಮುಂದಾಗಿರುತ್ತದೆ.

ಮೇಲೆ ಹೇಳಿದಂತೆ, ಪ್ರಸ್ತುತ ವಿಷಯದಲ್ಲಿ ಕೂಡ, ಬಂಧಿಯು ಭಾರತೀಯ ದಂಡ ಸಂಹಿತೆಯ ಉಪಬಂಧಗಳಡಿಯಲ್ಲಿ ಆರು ದಂಡನೀಯವಾದ ಅಪರಾಧಗಳನ್ನು

1. (2012)1 ಎಸ್‌ಸಿಸಿ 72

ಎಸಗಿರುತ್ತಾನೆಂಬ ಆಪಾದನೆಯೊಂದಿಗೆ ಆತನ ವಿರುದ್ಧ ಆರು ಪ್ರಕರಣಗಳನ್ನು ನೋಂದಾಯಿಸಲಾಗಿರುತ್ತದೆಂಬುದು ನಮಗೆ ಕಂಡು ಬರುತ್ತದೆ; ಬಂಧಿಯು ಎರಡು ಪ್ರಕರಣಗಳಲ್ಲಿ ಖುಲಾಸೆಯಾಗಿರುತ್ತಾನೆ; ಒಂದು ಕ್ರಿಮಿನಲ್ ಪ್ರಕರಣವಾಗಿದ್ದು, ಅದರಲ್ಲಿ ಈತ ಅಪರಾಧ ನಿರ್ಣೀತನಾಗಿದ್ದು, ಕಾರಾವಾಸದ ಶಿಕ್ಷೆಗೆ ಒಳಗಾಗಿರುತ್ತಾನೆ. ಉಳಿದ ಮೂರು ಪ್ರಕರಣಗಳಲ್ಲಿ ಈತನಿಗೆ ಜಾಮೀನನ್ನು ವಿಸ್ತರಿಸಲಾಗಿರುತ್ತದೆ. ಬಂಧಿಯ ವಿರುದ್ಧ ನೊಂದಾಯಿಸಲಾದ ಕೊನೆ ಪ್ರಕರಣ (ಅಂದರೆ ಕ್ರ.ಸಂ. 9ರಲ್ಲಿನ ಪ್ರಕರಣ)ವು ಅಪರಾಧ ಸಂಖ್ಯೆ:118/2015 ಆಗಿರುತ್ತದೆ. ಇದನ್ನು 2015ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 110ನೇ ಪ್ರಕರಣದಡಿಯಲ್ಲಿ ನೊಂದಾಯಿಸಲಾಗಿರುತ್ತದೆ. ಅಲ್ಲದೆ, ಕ್ರ.ಸಂ.4 ಹಾಗು 6ರಲ್ಲಿನ ಪ್ರಕರಣಗಳು ದಂಡ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣದ ಉಪಬಂಧಗಳಡಿಯಲ್ಲಿ ನವಾಗಿರುತ್ತವೆ. ಕರ್ನಾಟಕ ಕಳ್ಳಭಟ್ಟಿವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ರ 2(ಜಿ) ಪ್ರಕರಣದಲ್ಲಿ ಕಂಡುಬಂದಂಥ ಪರಿಭಾಷೆಯ ಪ್ರಕಾರ 'ಗೂಂಡಾ' ಎಂದರೆ ಭಾರತೀಯ ದಂಡ ಸಂಹಿತೆಯ ಅಧ್ಯಾಯ VIII, ಅಧ್ಯಾಯ–XV, ಅಧ್ಯಾಯ–XVI, ಅಧ್ಯಾಯ–XVII ಹಾಗೂ ಅಧ್ಯಾಯ– XXIII ಗಳಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ರೂಢಿಗತವಾಗಿ ಮಾಡುವ ಅಥವಾ ಮಾಡಲು ಪ್ರಯತ್ನಿಸುವ ಅಥವಾ ಮಾಡಲು ದುಷ್ಪ್ರೇರಿಸುವ ವ್ಯಕ್ತಿ ಅಥವಾ ಗುಂಪಿನ ಸದಸ್ಯ ಅಥವಾ ನಾಯಕ ಎಂಬ ಅರ್ಥವನ್ನು ಹೊಂದಿರುತ್ತದೆ. ಹಾಗಾಗಿ, ಶಾಂತಿ ಪಾಲನೆ ಹಾಗು ಸನ್ನಡತೆಯ ಉದ್ದೇಶಕ್ಕಾಗಿ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಡಿಯಲ್ಲಿ ಬಂಧಿಯ ವಿರುದ್ಧ ನೊಂದಾಯಿಸಲಾದ ಪ್ರಕರಣಗಳನ್ನು ಕರ್ನಾಟಕ ಕಳ್ಳಭಟ್ಟಿವ್ಯಾಪಾರಿಗಳ, ಮಾದಕವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ ಅಧಿನಿಯಮ, 1985ರ 2(ಜಿ) ಪ್ರಕರಣದ ಅರ್ಥವ್ಯಾಪ್ತಿಯೊಳಗಿನ 'ಗೂಂಡಾ'ದಂತೆ ಯಾರೇ ವ್ಯಕ್ತಿಯನ್ನು ಪರಿಗಣಿಸಲು ಪ್ರಯತ್ನಿಸಬಾರದೆಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ, ಬಂಧಿಯ ವಿರುದ್ಧ ದಂಡ ಪ್ರಕ್ರಿಯಾ ಸಂಹಿತೆಯ 107ನೇ ಪ್ರಕರಣ ಹಾಗು 110ನೇ ಪ್ರಕರಣದಡಿಯಲ್ಲಿ

ನೊಂದಾಯಿಸಿದ ಕ್ರ.ಸಂ.4, 6 ಹಾಗೂ 9ನೇ ಪ್ರಕರಣಗಳನ್ನು, ಗೂಂಡಾ ಎಂಬಂತೆ ಬಂಧಿಯನ್ನು ಪರಿಭಾಷಿಸುವಾಗ ಬಂಧಿಸುವ ಪ್ರಾಧಿಕಾರದ ನೆರವನ್ನು ತೆಗೆದುಕೊಳ್ಳಲಾಗಿರುವುದಿಲ್ಲ ಹಾಗು ಉದಾಹರಿಸಲಾಗಿರುವುದಿಲ್ಲ.

ಅದು ಇರುವಂತೆಯೇ ಇರಲಿ, ಬಂಧಿಯ ವಿರುದ್ಧ ನೊಂದಾಯಿಸಲಾಗಿರುವ 8ನೇ ಪ್ರಕರಣವು ಭಾರತೀಯ ದಂಡ ಸಂಹಿತೆಯಡಿಯಲ್ಲಿನ ಇತ್ತೀಚಿನ ಪ್ರಕರಣವು ದಿನಾಂಕ:11.5.2014ರಂದು ಎಸಗಲಾದ ಅಪರಾಧಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಭಾರತೀಯ ದಂಡ ಸಂಹಿತೆಯ ಉಪಬಂಧಗಳಡಿಯಲ್ಲಿ ಕೊನೆ ಪ್ರಕರಣದ ನೊಂದಣಿಯು ಸುಮಾರು 1 ವರ್ಷ, 10 ತಿಂಗಳಾಗಿರುವುದರಿಂದ ಅಂದರೆ 1.3.2016 ರಂದು ಬಂಧನಾದೇಶವನ್ನು ಹೊರಡಿಸಿರುವುದರಿಂದ ಬಂಧನಾದೇಶವು ಸದರಿ ಪ್ರಕರಣದಲ್ಲಿ ಸಾಮೀಪ್ಯತೆಯನ್ನು ಹೊಂದಿರುವುದಿಲ್ಲವೆಂದು ಹೇಳಲಾಗುವುದಿಲ್ಲ.

5. ವಿಷಯವನ್ನು ಅಖೈರುಗೊಳಿಸುವ ಮೊದಲು, ***ಮೆರುಗು ಸತ್ಯನಾರಾಯಣ –ವಿರುದ್ಧ– ಆಂಧ್ರ ಪ್ರದೇಶ*** [2] ಸರ್ಕಾರದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರೂಪಿಸಿದ ತೀರ್ಪನ್ನು ಗಮನಿಸುವುದು ಸೂಕ್ತವಾದುದಾಗಿದ್ದು, ಅದು ಈ ಮುಂದಿನಂತಿರುತ್ತದೆ: (ಸೂಕ್ತ ಭಾಗ)

> "16 . . . . . . . . . . ಈ ಪ್ರಕರಣದಲ್ಲಿ, ಜಿಲ್ಲಾ ಮ್ಯಾಜಿಸ್ಟ್ರೇಟರು, ಬಂಧಿಸುವ ಪ್ರಾಧಿಕಾರವು ತಮ್ಮ ಅಫಿಡಾವಿಟ್‌ನ್ನು ಸಲ್ಲಿಸುವುದನ್ನು ಆಯ್ಕೆ ಮಾಡಿಕೊಂಡಿರುವುದಿಲ್ಲ. ಎದುರುಗಿನ ಅಫಿಡಾವಿಟ್ಟನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸಲ್ಲಿಸಿರುತ್ತಾರೆ. ಇದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಜಿಲ್ಲಾ ಮ್ಯಾಜಿಸ್ಟ್ರೇಟರು ಸಲ್ಲಿಸಲು ಅಫಿಡಾವಿಟ್ಟನ್ನು ಸಲ್ಲಿಸುವಂಥ ಅವಕಾಶವನ್ನು ಹೊಂದಿರುತ್ತಾರೆಂಬುದನ್ನು ಅಥವಾ ಸಬ್ ಇನ್ಸ್‌ಪೆಕ್ಟರ್, ಬಂಧನಾದೇಶವನ್ನು ಮಾಡುವಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ನಿರ್ಧಾರವನ್ನು ಪ್ರಭಾವಿಸುವಂಥ ವ್ಯಕ್ತಿಯಾಗಿರುತ್ತಾರೆಂಬುದನ್ನು ಇದು ಸೂಚಿಸುತ್ತದೆಯೇ ? ಪೊಲೀಸ್

2. ಎಐಆರ್ 1982 ಎಸ್‌ಸಿ 1543

ಸಬ್ ಇನ್ಸ್‌ಪೆಕ್ಟರ್ ಜಿಲ್ಲಾ ಮ್ಯಾಜಿಸ್ಟ್ರೇಟರ್ ಮನೋ ಇಂಗಿತದ ಬಗ್ಗೆ ಹೇಗೆ ತಿಳಿದುಕೊಂಡರೆಂಬುದನ್ನು ಹೇಳಲಾಗುತ್ತಿಲ್ಲ. ಇವರು ತನಗೆ ಅವಕಾಶವಿದೆಯೆಂಬುದನ್ನು ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು ನಿರ್ವಹಿಸುವ ದಾಖಲೆಯ ಆಧಾರದ ಮೇಲೆ ಇವರು ಅಫಿಡಾವಿಟ್ಟನ್ನು ಸಿದ್ಧಪಡಿಸಿರುತ್ತಾರೆಂದೂ ಸಹ ಹೇಳಿರುವುದಿಲ್ಲ. ಆದ್ದರಿಂದ, ಕೆಲವು ಕ್ರಿಮಿನಲ್‌ಗಳ ಸಂದರ್ಭದಲ್ಲಿ ತನಿಖಾಧಿಕಾರಿಯಾಗಿ ಕಂಡು ಬರುವಂಥ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ, ಹುಕುಂನಿಂದಲೇ ತನಿಖೆ ನಡೆಯುತ್ತಿದ್ದು, ಪ್ರತಿಯೊಬ್ಬ ಬಂಧಿಯ ವಿಷಯದಲ್ಲೂ, ಜಿಲ್ಲಾ ಮ್ಯಾಜಿಸ್ಟ್ರೇಟರು ಬಂಧನಾದೇಶದ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ತ್ಯಜಿಸಿರುತ್ತಾರೆಂಬ ಇಂಗಿತಾರ್ಥವು ಪಡೆದುಕೊಳ್ಳುತ್ತದೆಂಬ ಊಹೆಯನ್ನು ಪ್ರತಿರೋಧಿಸಲಾಗುವುದಿಲ್ಲ. . . .

17. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮಟ್ಟದ ಅಧಿಕಾರಿಯ ಹೆಸರಿನಲ್ಲಿ ತನ್ನ ಪ್ರಕಾರ್ಯಗಳನ್ನು ಸಂಪೂರ್ಣವಾಗಿ ಬಿಟ್ಟುಕೊಡುವ ಮೂಲಕ ಈ ಪ್ರಕರಣದಲ್ಲಿ ಈತ ಮಾಡಿರುವಂಥ ರೀತಿಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಕರ್ತವ್ಯ ನಿರ್ವಹಿಸಿದ್ದಲ್ಲಿ, ಈ ನ್ಯಾಯಾಲಯವು ಸೂಚಿಸಿರುವ ಸುರಕ್ಷತಾ ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಭ್ರಾಮಕವೆಂತಲೂ ಹಾಗೂ ವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಗಂಭೀರವಾದ ಗಂಡಾಂತರವನ್ನು ಎದುರಿಸುತ್ತಿದೆ ಎಂಬುದನ್ನು ರುಜುವಾತುಪಡಿಸಿದಂತಾಗುತ್ತದೆ. ನಾವು, ಇನ್ನು ಮುಂದೆ, ಜಿಲ್ಲಾ ಮ್ಯಾಜಿಸ್ಟ್ರೇಟರು ಹೊಣೆಗಾರಿಕೆಯಿಂದ, ಸಂದರ್ಭೋಚಿತವಾಗಿ, ಈ ಮೊದಲು ಈ ನ್ಯಾಯಾಲಯವು ರೂಪಿಸಿದಂಥ ಮಾರ್ಗಸೂಚಿಗಳಂತೆ ಆತ ಕಾರ್ಯನಿರ್ವಹಿಸುತ್ತಾನೆಂದು ನಿರೀಕ್ಷಿಸಬಹುದಾಗಿರುತ್ತದೆ. ಆದಾಗ್ಯೂ, ಅರ್ಜಿದಾರನು ಎತ್ತಿಹಿಡಿದ ತಪ್ಪುಗಳು ಬಂಧನಾ ಪ್ರಾಧಿಕಾರದ ಅಫಿಡಾವಿಟ್ ಇಲ್ಲದಿರುವಲ್ಲಿ ವಿವಾದತೀತವಾದವುಗಳೆಂಬ ತೀರ್ಮಾನಕ್ಕೆ ನಾವು ಬರದೆ ಇರಲು ಸಾಧ್ಯವೇ ಇಲ್ಲ. ಈ ಪ್ರಕರಣದ ವಾಸ್ತವಾಂಶಗಳು ಹಾಗು ಸಂದರ್ಭಗಳಲ್ಲಿ ಪೊಲೀಸ್ ಸಬ್–

ಇನ್ಸ್‌ಪೆಕ್ಟರ್‌ರವರು ಸಲ್ಲಿಸಿದ ಪ್ರತಿ ಅಫಿಡಾವಿಟ್ಟಿನ ಯಾವುದೇ ನೋಟೀಸನ್ನು ತೆಗೆದುಕೊಳ್ಳಲು ನಾವು ನಿರಾಕರಿಸಿರುತ್ತೇವೆ.”

ಈ ವಿಷಯದಲ್ಲಿ, ಸರ್ವೋಚ್ಚ ನ್ಯಾಯಾಲಯವು ನೀಡಿರುವ ಮೇಲಿನ ತೀರ್ಪು ಸಂಪೂರ್ಣವಾಗಿ ಅನ್ವಯವಾಗುತ್ತದೆ. ಸರ್ಕಾರವು ಈ ರಿಟ್ ಅರ್ಜಿಯನ್ನು ವಿರೋಧಿಸುವ ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿರುತ್ತದೆ. ಆಕ್ಷೇಪಣೆಯ ಹೇಳಿಕೆಯು, ಜಿಲ್ಲಾ ಮ್ಯಾಜಿಸ್ಟ್ರೇಟರ್ ಬಂಧನಾದೇಶವನ್ನು ಬೆಂಬಲಿಸುವಂಥ ಬಂಧನಾದೇಶವನ್ನು ಹೊರಡಿಸುವ ಅವರ ಅಫಿಡಾವಿಟ್ಟಿನಿಂದ ಬೆಂಬಲಿತವಾಗಿರುವುದಿಲ್ಲ. ಅದಕ್ಕೆ ವಿರುದ್ಧವಾಗಿ, ಆಕ್ಷೇಪಣೆಗಳ ಹೇಳಿಕೆಯ ಮೈಸೂರು ನಗರದ ಕೃಷ್ಣರಾಜ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರ ಅಫಿಡಾವಿಟ್ಟಿನಿಂದ ಬೆಂಬಲಿತವಾಗಿರುತ್ತದೆ. ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಕಡತವನ್ನು ಪರಾಂಬರಿಸುವ ಅವಕಾಶ ಇರುತ್ತದೆಂದು ಅಥವಾ ಸಬ್‌ಇನ್ಸ್‌ಪೆಕ್ಟರ್ ಬಂಧನಾದೇಶವನ್ನು ಮಾಡುವಾಗ ಯಾವುದೇ ನಿರ್ಧಾರ ತೆಗೆದುಕೊಳ್ಳುವ ಅಥವಾ ಯಾವುದೇ ಪಾತ್ರವನ್ನು ನಿರ್ವಹಿಸುವಷ್ಟು ಪ್ರಭಾವಿತರಾಗಿರುತ್ತಾರೆಂದೂ ಹೇಳಲಾಗುವುದಿಲ್ಲ. ಪೊಲೀಸ್ ಇನ್ಸ್‌ಪೆಕ್ಟರ್‌ರವರು, ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಗೆ ಈ ಬಗ್ಗೆ ಹೇಗೆ ಮನವರಿಕೆಯಾಯಿತು ಎಂಬುದನ್ನು ಬಹಿರಂಗ ಪಡಿಸಿರುವುದಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟರು ಈ ರಿಟ್ ಅರ್ಜಿಯ ಪಕ್ಷಕಾರನಾಗಿದ್ದಾಗ್ಯೂ, ತನ್ನ ಆದೇಶವನ್ನು ಸಮರ್ಥಿಸುವ ತನ್ನ ಅಫಿಡಾವಿಟ್ಟಿನ ಸಲ್ಲಿಕೆಯ ಆಯ್ಕೆಯನ್ನು ಮಾಡಿಕೊಂಡಿರುವುದಿಲ್ಲ ಹಾಗೂ ಬಂಧನಾದೇಶವನ್ನು ಬೆಂಬಲಿಸಲು ಪೊಲೀಸ್ ಇನ್ಸ್‌ಪೆಕ್ಟರ್‌ನಿಗೆ ಬಿಟ್ಟು ಕೊಟ್ಟಿರುತ್ತಾನೆ. ಜಿಲ್ಲಾ ಮ್ಯಾಜಿಸ್ಟ್ರೇಟ್‌ರು ನಿರ್ವಹಿಸಿದ ದಾಖಲೆಗಳ ಆಧಾರದ ಮೇಲೆ ಇನ್ಸ್‌ಪೆಕ್ಟರ್ ಅಫಿಡಾವಿಟ್ಟನ್ನು ಸಲ್ಲಿಸಿರುತ್ತಾನೆಂಬ ಆಕ್ಷೇಪಣೆಗಳ ಹೇಳಿಕೆಯಲ್ಲಿ ಇದನ್ನು ಬಹಿರಂಗ ಪಡಿಸಲಾಗಿರುವುದಿಲ್ಲ. ಆದ್ದರಿಂದ, ಬಂಧಿಯೆಂದು ಸೂಚಿಸಿರುವಂಥ ಕೆಲವು ಕ್ರಿಮಿನಲ್ ಪ್ರಕರಣಗಳಲ್ಲಿ ತನಿಖಾಧಿಕಾರಿಯಾಗಿ ಕಂಡು ಬರುವಂಥ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರ ಅಣತಿಯಂತೆಯೇ, ಪ್ರಶ್ನಿತ ಆದೇಶವನ್ನು ಬಂಧನಾ ಪ್ರಾಧಿಕಾರವು ಹೊರಡಿಸಿರುತ್ತದೆ. ತದನುಸಾರವಾಗಿ, ಜಿಲ್ಲಾ ಮ್ಯಾಜಿಸ್ಟ್ರೇಟ್‌ರು, ಬಂಧನಾದೇಶವನ್ನು ಮಾಡುವಾಗ ತಮ್ಮ ಹೊಣೆಗಾರಿಕೆಗಳನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟಿರುತ್ತಾರೆ. ಜಿಲ್ಲಾ ಮ್ಯಾಜಿಸ್ಟ್ರೇಟರು, ಪೊಲೀಸ್ ಇನ್ಸ್‌ಪೆಕ್ಟರ್ ಹಂತದ

ಅಧಿಕಾರಿಯ ಹೆಸರಿನಲ್ಲಿ ತಮ್ಮ ಪ್ರಕಾರ್ಯಗಳನ್ನು ಸಂಪೂರ್ಣವಾಗಿ ಬಿಟ್ಟು ಕೊಡಲಾಗಿರುವುದನ್ನು ಈ ಪ್ರಕರಣದಲ್ಲಿ ಹೇಳುವುದೇ ಆದರೆ, ಅವರು ನ್ಯಾಯಾಲಯವು ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಚಿಸಿರುವ ಸುರಕ್ಷತಾ ಕ್ರಮಗಳನ್ನು ಸಂಪೂರ್ಣವಾಗಿ ರುಜುವಾತು ಪಡಿಸಬೇಕಾದ ಅವಶ್ಯಕತೆಯಿರುತ್ತದೆ ಹಾಗು ಮೂಲಭೂತ ಹಕ್ಕು ಗಂಭೀರ ಗಂಡಾಂತರವನ್ನು ಎದುರಿಸುತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗಿರುತ್ತದೆ. ಈ ದೃಷ್ಟಿಯಿಂದ, ಪೊಲೀಸ್ ಇನ್ಸ್‌ಪೆಕ್ಟರ್ ಸಲ್ಲಿಸಿರುವ ಅಫಿಡಾವಿಟ್ಟನ್ನು ಅಲಕ್ಷಿಸಬೇಕಾದ ಅವಶ್ಯಕತೆಯಿದ್ದು, ಇದನ್ನು ಅಲಕ್ಷಿಸಲಾಗಿರುತ್ತದೆ. ಆದಾಗ್ಯೂ, ಅರ್ಜಿದಾರರು ಪ್ರಸ್ತಾಪಿಸಿದ ತಪ್ಪುಗಳು ಬಂಧನ ಪ್ರಾಧಿಕಾರದ ಅಫಿಡಾವಿಟ್ಟು ಇಲ್ಲದಿರುವಲ್ಲಿ ವಿವಾದಾತೀತವಾಗಿ ಉಳಿದುಕೊಂಡಿವೆಯೆಂಬ ತೀರ್ಮಾನವೇ ಅಂತಿಮವಾದ ತಿರ್ಮಾನವಾಗಿರುತ್ತದೆ.

6. ಮೇಲೆ ಹೇಳಿದ ವಾಸ್ತವಾಂಶಗಳು ಹಾಗು ಸಂದರ್ಭಗಳು ಹಾಗೂ ಈ ಹಿಂದೆ ನಿರೂಪಿಸಲಾದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಪ್ರಶ್ನಿತ ಆದೇಶಗಳು ರದ್ದುಪಡಿಸಲು ತಕ್ಕವಾಗಿವೆ. ತದನುಸಾರವಾಗಿ, 1.3.2016ನೇ ದಿನಾಂಕದ ಅನುಬಂಧ–'ಎ', 5.3.2016ನೇ ದಿನಾಂಕದ ಅನುಬಂಧ–'ಡಿ' ಹಾಗು 13.4.2016ನೇ ದಿನಾಂಕದ 'ಇ' ಅನುಬಂಧಗಳಲ್ಲಿನ ಪ್ರಶ್ನಿತ ಆದೇಶಗಳನ್ನು ರದ್ದುಪಡಿಸಲಾಗಿರುತ್ತದೆ. ಬಂಧಿಯನ್ನು, ಯಾವುದೇ ಇತರೆ ಕ್ರಿಮಿನಲ್ ಪ್ರಕರಣದಲ್ಲಿ ಅಗತ್ಯಪಡಿಸದಿದ್ದಲ್ಲಿ, ಈ ಕೂಡಲೇ ಬಿಡುಗಡೆಗೊಳಿಸತಕ್ಕದ್ದು.

ನಾವು, ಕಾನೂನಿನಲ್ಲಿ ಅಗತ್ಯಪಡಿಸಲಾದಂತೆ ಅವಶ್ಯವಾದಲ್ಲಿ, ಬಂಧಿಯ ವಿರುದ್ಧ ಹೊಸ ನಡಾವಳಿಯನ್ನು ಆರಂಭಿಸುವುದಕ್ಕೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಮುಕ್ತ ಅವಕಾಶ ಇರುತ್ತದೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಿರುತ್ತೇವೆ.

ಈ ಆದೇಶದ ಜಾರಿಯ ಭಾಗವನ್ನು, ಕೂಡಲೇ ಸಂಬಂಧಪಟ್ಟ ಬಂಧೀಖಾನೆ ಪ್ರಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

---